ದಿನಾಂಕಃ 23-02-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು ಃ** ಶ್ರೀ ಎಂ ಎನ್ ವಕೀಲರಿಂದ ಪ್ರತಿವಾದಿ ಪರವಾಗಿ .

ನನ್ನ ತಾತನ ಹೆಸರು ಹೊನ್ನೂರಪ್ಪ ಅಂತ ಇರುತ್ತದೆ . ನಿಮ್ಮ ತಾತನಿಗೆ ಇಬ್ಬರು ಹೆಂಡತಿಯರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ನಾನು ಗುಂಡಪ್ಪ ಬಿನ್ ಮಾರಣ್ಣನವರನ್ನು ನೋಡಿರುತ್ತೇನೆ . ಗುಂಡಪ್ಪನಿಗೆ ಇಬ್ಬರು ಮಕ್ಕಳಿರುತ್ತಾರೆ , ಅವರೆಂದರೆ , ಮಹೇಶ ಮತ್ತು ಶಿವಪ್ರಸಾದ್ ಅಂತ ಇರುತ್ತಾರೆ . ನನ್ನ ತಂದೆಯ ತಮ್ಮನ ಹೆಸರು ನನಗೆ ಗೊತ್ತಿಲ್ಲ . ನಿಮ್ಮ ತಂದೆಯ ತಮ್ಮನ ಹೆಸರು ಮಾರಣ್ಣ ಅಂತ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಸ ನಂ .64 , 3 ಎಕರೆ 31 ಗುಂಟೆ ಜಮೀನಿರುತ್ತದೆ . ಸದರಿ ಆಸ್ತಿಯಲ್ಲಿ ನಿಮ್ಮ ತಂದೆಗೆ ಮತ್ತು ಮಾರಣ್ಣನಿಗೆ ತಲಾ ಅರ್ಧ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು , ಅದು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ . ನೀವು ಆ ಬಗ್ಗೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ .

ಸ ನಂ .143 ರಲ್ಲಿ , 6 ಎಕರೆ 20 ಗುಂಟೆ ಜಮೀನಿರುತ್ತದೆ . ಸದರಿ ಆಸ್ತಿಯಲ್ಲಿ ನಿಮ್ಮ ತಂದೆಗೆ ಮತ್ತು ಮಾರಣ್ಣನಿಗೆ ತಲಾ ಅರ್ಧ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು , ಅದು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ . ನೀವು ಆ ಬಗ್ಗೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ಸ ನಂ 71/1 ಬಿ ರಲ್ಲಿ , 4 ಎಕರೆ 8 ಗುಂಟೆ ಜಮೀನು ನಿಮ್ಮ ತಂದೆಯ ಸ್ವಯಾರ್ಜಿತ ಆಸ್ತಿ ಇರುತ್ತದೆ ಎಂದರೆ ನಿಜ . ಸ ನಂ 71/1 ಸಿ ಜಮೀನು ತಿಪ್ಪೇಸ್ವಾಮಿಗೆ ಸೇರಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆ ತೀರಿಕೊಂಡ ನಂತರ ಸದರಿ ಜಮೀನನ್ನು ತೆಗೆದುಕೊಂಡಿರುತ್ತೇವೆ ಮತ್ತು ಅದನ್ನು ಬ್ಯಾಂಕಿನಲ್ಲಿ ಅಡಮಾನ ಮಾಡಿರುತ್ತೇವೆ ಎಂದು ನುಡಿಯುತ್ತಾರೆ

.

1 ನೇ ಪ್ರತಿವಾದಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿದ್ದರು ಎಂದರೆ ಸರಿ . 1 ನೇ ಪ್ರತಿವಾದಿ 2004 ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ . 1 ನೇ ಪ್ರತಿವಾದಿ ನಿವೃತ್ತಿ ನಂತರ ಬಂದ ಸರ್ಕಾರಿ ನಿವೃತ್ತಿ ಹಣದಲ್ಲಿ ದಾವಾ ಆಸ್ತಿ ಐಟಂ ನಂ.4 ಅನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು , ಬ್ಯಾಂಕಿನಲ್ಲಿ ಸಾಲವನ್ನು ಪಡೆದು ಸದರಿ ಆಸ್ತಿಯನ್ನು ತೆಗೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ . ದಾವಾ ಆಸ್ತಿಯ ಐಟಂ ನಂ.4 , 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ . ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ . ನನಗೆ ಓದಲು ಅಷ್ಟೊಂದು ಬರುವುದಿಲ್ಲ .

(ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀಸವಾಲಿಗಾಗಿ ಸಮಯ ಕೋರಿರುತ್ತಾರೆ , ರೂ.100/– ಖರ್ಚು ವಿಧಿಸಿ ಮುಂದೂಡಲಾಯಿತು )

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ**
**ಪಾವಗಡ.**